2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**115/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಎ.ಹೆಚ್. ರಾಜೇಗೌಡ | ಪಿಡಬ್ಲೂ - 8 |
| ತಂದೆಯ ಹೆಸರು | - | ಲೇಟ್ ಹೂವೇಗೌಡ | ಸಿಡಬ್ಲೂ - 10 |
| ವಯಸ್ಸು | - | 67 ವರ್ಷ | |
| ಉದ್ಯೋಗ | - | ನಿವೃತ್ತ ಎ.ಎಸ್.ಐ, ಪೊಲೀಸ್ ಇಲಾಖೆ | |
| ವಾಸ ಸ್ಥಳ | - | ಉದಯನಗರ, ದಂಟರಮಕ್ಕಿ, ಚಿಕ್ಕಮಗಳೂರು | |

ದಿನಾಂಕಃ 20-04-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ಚಾಸಾ.9 ಮಂಜುಳಾ ಇವರು ನನ್ನ ಹೆಂಡತಿ ಇರುತ್ತಾರೆ. ಪಿರ್ಯಾದಿ ಕಾವ್ಯಶ್ರೀ ನನ್ನ ಮಗಳು. 1 ನೇ ಆರೋಪಿ ಸುಪ್ರೀತ್ ನನ್ನ ಅಳಿಯ, 2 ಮತ್ತು 3 ನೇ ಆರೋಪಿಗಳು ಆತನ ತಾಯಿ ತಂದೆ ಮತ್ತು 4 ನೇ ಆರೋಪಿ 1 ನೇ ಆರೋಪಿಯ ಅಕ್ಕ ಇರುತ್ತಾರೆ. ನನಗೆ 4 ಜನ ಹೆಣ್ಣು ಮಕ್ಕಳು ಇರುತ್ತಾರೆ. 1 ನೇ ಮಗಳ ಹೆಸರು ಸುಮಾ, 2 ನೇ ಮಗಳ ಹೆಸರು ಕಾವ್ಯಶ್ರೀ, 3 ನೇ ಮಗಳ ಹೆಸರು ಶಾಂತಲ, 4 ನೇ ಮಗಳ ಹೆಸರು ಚಿತ್ರಕಲಾ. ನನ್ನ 2 ನೇ ಮಗಳು ಕಾವ್ಯಶ್ರೀಯನ್ನು ಮದುವೆ ಮಾಡಲು ನಿಶ್ಚಯಿಸಿದ್ದು, ಆಗ ನಮ್ಮ ಸಂಬಂಧಿಕರಾದ ಶ್ರೀ ಅಜ್ಜೇಗೌಡ ಜೆ.ಕೆ ಇವರು ನನ್ನ ಮಗಳಿಗೆ ಒಂದು ಗಂಡನ್ನು ಹುಡುಕಿದ್ದು, ಅದು ಚಿಕ್ಕಮಗಳೂರಿನ ಲಕ್ಷ್ಮೀಶನಗರದ ವಾಸಿಗಳಾದ ಹೆಚ್.ಡಿ. ಹುಚ್ಚೇಗೌಡ ಮತ್ತು ಗೀತಾ ಇವರ ಮಗನಾದ ಸುಪ್ರೀತ್ ನ ಸಂಬಂಧವನ್ನು ನಮಗೆ ತೋರಿಸಿರುತ್ತಾರೆ. ಆಗ ನಾವು ಬೀರೂರಿನಲ್ಲಿ ವಾಸವಾಗಿದ್ದೆವು. ನಂತರ ನಮ್ಮ ಮಗಳನ್ನು ನೋಡಲು 1 ರಿಂದ

4 ನೇ ಆರೋಪಿಗಳು ಬಂದಿದ್ದರು. ನಮ್ಮ ಮನೆಯಲ್ಲಿಯೇ ಮದುವೆ ಮಾತುಕತೆಯಾಗಿರುತ್ತದೆ. ಮದುವೆಯ ಮಾತುಕತೆ ಸಮಯದಲ್ಲಿ ನಮ್ಮ ಕಡೆಯಿಂದ ಅಜ್ಜೇಗೌಡ ಮತ್ತು ಹುಡುಗನ ಕಡೆಯಿಂದ ಆತನ ತಂದೆ ತಾಯಿ ಮತ್ತು ಅಕ್ಕ ಬಂದಿದ್ದರು. ಮದುವೆಯ ಮಾತುಕತೆ ಸಮಯದಲ್ಲಿ ಆರೋಪಿಗಳು 500gm ಬಂಗಾರವನ್ನು ವರದಕ್ಷಿಣೆಯಾಗಿ ಕೊಡಲು ಕೇಳಿರುತ್ತಾರೆ. ಅದಕ್ಕೆ ನಾವು ಅಷ್ಟು ಕೊಡಲು ಆಗುವುದಿಲ್ಲ, ನಮ್ಮ ಕೈಯಲ್ಲಿ ಎಷ್ಟು ಆಗುತ್ತದೋ ಅಷ್ಟು ಕೊಡುತ್ತೇವೆ ಎಂದು ಹೇಳಿರುತ್ತೇವೆ.

2. ನಂತರ ಮದುವೆಯನ್ನು ದಿಃ 04.03.2013 ರಂದು ಹಾಸನ ಜಿಲ್ಲೆಯ ಹಳೇಬೀಡಿನ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ನಮ್ಮ ಮಗಳು ಕಾವ್ಯಶ್ರೀಯನ್ನು 1 ನೇ ಆರೋಪಿಗೆ ಕೊಟ್ಟು ಮದುವೆ ಮಾಡಿರುತ್ತೇವೆ. ಮದುವೆ ಸಂದರ್ಭದಲ್ಲಿ 1 ನೇ ಆರೋಪಿಗೆ ಒಂದು ಬಂಗಾರದ ಸರ, ನಮ್ಮ ಮಗಳು ಕಾವ್ಯಶ್ರೀಗೆ ಒಂದು ಜೊತೆ ಬಳೆ, ಒಂದು ನೆಕ್ ಲೇಸ್, ಒಂದು ಜೊತೆ ಓಲೆ ಮತ್ತು 2 ಉಂಗುರಗಳನ್ನು ಹಾಕಿರುತ್ತೇವೆ.

3. ಮದುವೆಯಾದ ನಂತರ ನಮ್ಮ ಮಗಳು ಕಾವ್ಯಶ್ರೀ ತನ್ನ ಗಂಡನ ಜೊತೆ ಅವರ ಮನೆಯಲ್ಲಿ ವಾಸಮಾಡುತ್ತಾಳೆ. ನಂತರ ಕಾವ್ಯಶ್ರೀ ಗಂಡ 1 ನೇ ಆರೋಪಿಯ London ಗೆ ಹೋಗಬೇಕಾಗಿ ಬಂದಿದ್ದರಿಂದ ಅವನು ಹೋಗುತ್ತಾನೆ. ಆಗ ನನ್ನ ಮಗಳು ಅವಳ ಅತ್ತೆಯ ಮನೆಯಲ್ಲಿ ಇರುತ್ತಾಳೆ. ಕಾವ್ಯಶ್ರೀಯು ತನ್ನ ಗಂಡನ ಜೊತೆಯಲ್ಲಿ ತಾನು London ಗೆ ಹೋಗುತ್ತೇನೆ ಎಂದಾಗ ಆಕೆಯು ಗಂಡನ ಮನೆಯವರು ಕಾವ್ಯಶ್ರೀಗೆ 500 gm ಬಂಗಾರವನ್ನು ತಂದು

ಕೊಡುವ ವರೆಗೂ ಆತನ ಗಂಡನ ಜೊತೆ London ಗೆ ಕಳುಹಿಸುವುದಿಲ್ಲ ಎಂದು ಹೇಳಿರುತ್ತಾರೆ. ಆ ರೀತಿ ಅವಳು ಗಂಡನನ್ನು ಬಿಟ್ಟು ಒಂದು ವರ್ಷ 2 ಮತ್ತು 3 ನೇ ಆರೋಪಿಗಳ ಮನೆಯಲ್ಲಿ ಇರುತ್ತಾಳೆ. ನಂತರ 1 ವರ್ಷವಾದ ಮೇಲೆ ಕಾವ್ಯಶ್ರೀಯು ತಾನು ತನ್ನ ಗಂಡನ ಜೊತೆ ಹೋಗಲೇ ಬೇಕು ಎಂದು ಅವಳ ಅತ್ತೆ ಮಾವನ ಕೈ ಕಾಲು ಹಿಡಿದು ಕೇಳಿಕೊಂಡಿದ್ದರಿಂದ ಆಗ ಅವರು ಅವಳನ್ನು London ಗೆ ಕಳುಹಿಸಿಕೊಟ್ಟಿರುತ್ತಾರೆ. ನಂತರ London ನಿಂದ ಕಾವ್ಯಶ್ರೀ ಮತ್ತು 1 ನೇ ಆರೋಪಿ ಚಿಕ್ಕಮಗಳೂರಿಗೆ ಅವರ ಮನೆಗೆ ಬಂದಿರುತ್ತಾರೆ.

4. ನಂತರ ದಿಃ 23.08.2015 ರಂದು 1 ರಿಂದ 3 ನೇ ಆರೋಪಿಗಳು ನನ್ನ ಮಗಳ ಜೊತೆ ಜಗಳ ತೆಗೆದು ಅವಳಿಗೆ ಹೊಡೆದು ಗಾಯ ಮಾಡಿರುತ್ತಾರೆ. ನಂತರ ಆರೋಪಿಗಳ ವಿರುದ್ಧ ನನ್ನ ಮಗಳು ಚಿಕ್ಕಮಗಳೂರಿನ ನಗರ ಠಾಣೆಗೆ ದೂರು ನೀಡಿರುತ್ತಾಳೆ.

5. ನಂತರ ಠಾಣೆಯಲ್ಲಿ ಸದರಿನ ವಿಚಾರವಾಗಿ 2 ಕಡೆಯವರನ್ನು ಕರೆಯಿಸಿ ರಾಜೀ ಪಂಚಾಯಿತಿ ಮಾಡಿ ನನ್ನ ಮಗಳು ಮತ್ತು 1 ನೇ ಆರೋಪಿಯ ಒಂದು ಮಾಡಿ ಅವಳ ಗಂಡನ ಜೊತೆಯಲ್ಲಿ ಅವಳ ಅತ್ತೆ ಮಾವನ ಮನೆಗೆ ಕಳುಹಿಸಿಕೊಟ್ಟಿರುತ್ತೇವೆ. ನಂತರ 1 ನೇ ಆರೋಪಿಯು ನನ್ನ ಮಗಳನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಸಂಸಾರ ಮಾಡಿರುತ್ತಾನೆ. ಆ ಸಮಯದಲ್ಲಿ ನನ್ನ ಮಗಳು ಗರ್ಬಿಣಿಯಾಗಿದ್ದು ನಂತರ ನಾವೆಲ್ಲರು ಅವಳ ಸೀಮಂತವನ್ನು ಮಾಡಿ ಕಾವ್ಯಶ್ರೀಯನ್ನು ಚಿಕ್ಕಮಗಳೂರಿಗೆ ಕರೆದುಕೊಂಡು ಬಂದಿರುತ್ತೇವೆ. ನಂತರ ನಮ್ಮ ಮಗಳು ಕಾವ್ಯಶ್ರೀಗೆ ಚಿಕ್ಕಮಗಳೂರಿನ

ಹೋಲಿ ಕ್ರಾಸ್ ಆಸ್ಪತ್ರೆಯಲ್ಲಿ ದಿಃ 16.06.2016 ರಲ್ಲಿ ಒಂದು ಗಂಡು ಮಗು ಆಗುತ್ತದೆ ಮತ್ತು 9 ತಿಂಗಳು ಕಾಲ ನಮ್ಮ ಮನೆಯಲ್ಲಿ ಇದ್ದು ಬಾಣಂತಿತನ ಮುಗಿದ ಮೇಲೆ ಅವಳನ್ನು 1 ನೇ ಆರೋಪಿಯು ತನ್ನ ಬೆಂಗಳೂರಿನ ಮನೆಗೆ ಕರೆದುಕೊಂಡು ಹೋಗಿರುತ್ತಾನೆ. ಬೆಂಗಳೂರಿಗೆ ಹೋದ ನಂತರ ಗಂಡ ಹೆಂಡತಿ ಸ್ವಲ್ಪ ದಿನ ಚೆನ್ನಾಗಿ ಇದ್ದರು.

6. ನಂತರ ದಿಃ07.05.2017 ರಂದು ನಮ್ಮ 3 ನೇ ಮಗಳ ಮಗುವಿನ Birthday ಇದ್ದು ಆ ಮಗುವಿಗೆ gift ಕೊಡಿಸುವ ವಿಚಾರದಲ್ಲಿ ಕಾವ್ಯಶ್ರೀ ಮತ್ತು 1 ನೇ ಆರೋಪಿಯ ನಡುಗೆ ಗಲಾಟೆ ಆಗಿರುತ್ತದೆ. ಆ ಸಮಯದಲ್ಲಿ 1 ನೇ ಆರೋಪಿಯು ನನ್ನ ಮಗಳ ಕಾವ್ಯಶ್ರೀಯ ಕುತ್ತಿಗೆಯನ್ನು ಹಿಸುಕಿ ಕೊಲೆ ಮಾಡಲು ಪ್ರಯತ್ನಿಸಿದಾಗ, ಆಗ ನನ್ನ ಮಗಳು ಬೆಂಗಳೂರಿನ Victoria ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತಾಳೆ. ನಂತರ ಅವಳು ಫೋನ್ ಮಾಡಿ ನಮಗೆ ವಿಷಯ ತಿಳಿಸಿದ್ದು ಅದರಂತೆ ನಾನು ಮತ್ತು ಅಜ್ಜೇಗೌಡರು ಬೆಂಗಳೂರಿಗೆ ಹೋಗಿ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ 1 ನೇ ಆರೋಪಿಯ ವಿರುದ್ಧ ನಮ್ಮ ಮಗಳಿಂದ ದೂರು ಕೊಡಿಸಿರುತ್ತೇವೆ. ಆ ದೂರಿನ ಕುರಿತಂತೆ ಠಾಣೆಯಲ್ಲಿ ರಾಜೀ ಮಾಡಿ ನಂತರ ನನ್ನ ಮಗಳನ್ನು ವಾಪಸ್ಸು 1 ನೇ ಆರೋಪಿಯ ಮನೆಗೆ ಕಳುಹಿಸಿಕೊಟ್ಟಿರುತ್ತೇವೆ. ನಂತರ ನನ್ನ ಮಗಳನ್ನು ಬೆಂಗಳೂರಿನಿಂದ ಚಿಕ್ಕಮಗಳೂರಿನ ಅವಳ ಅತ್ತೆ, ಮಾವನ ಮನೆಯಲ್ಲಿ ಕರೆದುಕೊಂಡು ಬಂದು ಬಿಟ್ಟಿರುತ್ತೇವೆ.

7. ನಂತರ ನಮ್ಮ ಮಗಳು ತನ್ನ ಅತ್ತೆ ಮಾವನ ಮನೆಯಲ್ಲಿ ಇದ್ದ

ಸಮಯದಲ್ಲಿ ಚಿಕ್ಕಮಗಳೂರಿನ ಹನುಮಂತಪ್ಪ ಸರ್ಕಲ್ ನಲ್ಲಿ ಇರುವ ಮಹಿಳಾ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದಳು. ಸದರಿ ಕಾಲೇಜು ಎಂ.ಇ.ಎಸ್. ಆಗಿತ್ತು. ಆಗಲು ಸಹ 2 ಮತ್ತು 3 ನೇ ಆರೋಪಿಗಳು ನನ್ನ ಮಗಳು ಕಾವ್ಯಶ್ರೀಗೆ ವರದಕ್ಷಿಣೆಯ ವಿಚಾರವಾಗಿ ಮಾನಸಿಕ ಮತ್ತು ದೈಹಿಕ ಹಿಂಸೆ ಕೊಡುತ್ತಿದ್ದರು ಮತ್ತು 4 ನೇ ಆರೋಪಿ ಶೀಲಾ ಅವಳ ತಂದೆ ತಾಯಿಯಾದ 2 ಮತ್ತು 3 ನೇ ಆರೋಪಿಗಳಿಗೆ ಫೋನ್ ಮಾಡಿ ನನ್ನ ಮಗಳಿಗೆ ವರದಕ್ಷಿಣೆಯ ವಿಚಾರವಾಗಿ ಹಿಂಸೆ ನೀಡುವಂತೆ ಪ್ರೇರೇಪಿಸಿರುತ್ತಾಳೆ.

8. ದಿಃ 27.09.2017 ರಂದು ಮಧ್ಯಾಹ್ನ 1.30 ಗಂಟೆಗೆ ನಮ್ಮ ಸಂಬಂಧಿಕರಾದ ಸರೋಜ ಎಂಬುವವರು ನನಗೆ ಫೋನ್ ಮಾಡಿ 2 ಮತ್ತು 3 ನೇ ಆರೋಪಿಗಳು ಕಾವ್ಯಶ್ರೀಗೆ ಚಾಕುವಿನಿಂದ ಕೈ ಮತ್ತು ಕಾಲಿಗೆ ಬರೇ ಹಾಕಿ, ಅವಳ ಕುತ್ತಿಗೆಗೆ ಮೊಬೈಲ್ Charger ವೈರ್ ನಿಂದ ಬಿಗಿದು ಅವಳನ್ನು ಕೊಲೆ ಮಾಡಲು ಪ್ರಯತ್ನ ಪಟ್ಟಿದ್ದು, ನಂತರ 2 ನೇ ಆರೋಪಿ ಗೀತಾ ಇವಳು ಕಾವ್ಯಶ್ರೀಯ ಬೆನ್ನಿಗೆ ಗುದ್ದಿದ್ದು, ನಂತರ ಆರೋಪಿಗಳು ಕಾವ್ಯಶ್ರೀಯನ್ನು ಕೊಲೆ ಮಾಡದೇ ಬಿಡುವುದಿಲ್ಲವೆಂದು ಮತ್ತು ನನ್ನ ಮಗಳು ಕಾವ್ಯಶ್ರೀ ಸತ್ತರೇ 1 ನೇ ಆರೋಪಿಗೆ ಬೇರೆ ಮದುವೆ ಮಾಡುತ್ತೇವೆ ಎಂದು ಗಲಾಟೆ ಮಾಡುತ್ತಿದ್ದಾಗ, ಆಗ ಸದರಿ ಸರೋಜ ಇವರು ಗಲಾಟೆಯನ್ನು ಬಿಡಿಸಿ ನನ್ನ ಮಗಳು ಕಾವ್ಯಶ್ರೀಯನ್ನು ಚಿಕ್ಕಮಗಳೂರಿನ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲು ಮಾಡಿರುವ ವಿಷಯವನ್ನು ನನಗೆ ತಿಳಿಸಿರುತ್ತಾಳೆ.

9. ನಂತರ ವಿಷಯವನ್ನು ತಿಳಿದು ತಕ್ಷಣ ನಾನು ಮತ್ತು ನನ್ನ ಹೆಂಡತಿ ಆಸ್ಪತ್ರೆಗೆ ಹೋಗಿ ನನ್ನ ಮಗಳನ್ನು ವಿಚಾರಿಸಿದಾಗ ನನ್ನ ಮಗಳು ಅವಳ ಅತ್ತೆ ಮಾವ ವರದಕ್ಷಿಣೆ ತರಲಿಲ್ಲ, ಮಧ್ಯಾಹ್ನ ನನ್ನ ಮಗಳು ಊಟಕ್ಕೆ ಬಂದಿದ್ದಕ್ಕೆ ಊಟವೇನು ಪುಕಸಟ್ಟೆ ಸಿಗುತ್ತದೆಯಾ ಎಂದು ಬೈದು, 3 ನೇ ಆರೋಪಿ ಹುಚ್ಚೆಗೌಡರು ಚಾಕುವನ್ನು ಸ್ಟವ್ ವಲೆಯ ಮೇಲೆ ಕಾಯಿಸಿ ತನಗೆ ತನ್ನ ಎಡಗೆ ಮತ್ತು ಬಲಗಾಲಿಗೆ ಸದರಿ ಚಾಕುವಿನಿಂದ ಬರೇ ಹಾಕಿ, ಮೊಬೈಲ್ ಚಾರ್ಜರ್ ವೈರ್ ನಿಂದ ತನ್ನ ಕುತ್ತಿಗೆಗೆ ಬಿಗಿದು ಕೊಲೆ ಮಾಡುವ ಪ್ರಯತ್ನ ಮಾಡಿದ್ದು ಮತ್ತು 2 ನೇ ಆರೋಪಿ ತನ್ನ ಕೈಗಳನ್ನು ಬಲವಾಗಿ ಹಿಡಿದುಕೊಂಡು ತನ್ನ ಬೆನ್ನಿಗೆ ಅವಳ ಕೈಯಿಂದ ಬಲವಾಗಿ ಗುದ್ದಿದ್ದು, ನಂತರ 2 ಮತ್ತು 3 ನೇ ಆರೋಪಿಗಳು ತಾನು ಸತ್ತರೇ 1 ನೇ ಆರೋಪಿಗೆ ಇನ್ನೊಂದು ಮದುವೆ ಮಾಡುತ್ತೇನೆ ಎಂದು ಹೇಳಿ ಹಲ್ಲೆ ಮಾಡಿರುವ ವಿಚಾರವನ್ನು ನನ್ನ ಮಗಳು ಹೇಳಿರುತ್ತಾಳೆ. ಅದೇ ರೀತಿ ನನ್ನ ಮಗಳು ಕಾವ್ಯಶ್ರೀಯು ಗಲಾಟೆಯನ್ನು ನಮ್ಮ ಸಂಬಂಧಿಕರಾದ ಸರೋಜ ಇವರು ಬಿಡಿಸಿ ಅವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ ಬಗ್ಗೆ ಹೇಳಿದಳು.

10. ನಂತರ ಈ ವಿಚಾರವಾಗಿ ನನ್ನ ಮಗಳ ಕಡೆಯಿಂದ ಚಿಕ್ಕಮಗಳೂರಿನ ಮಹಿಳಾ ಪೊಲೀಸ್ ಠಾಣೆಯಲ್ಲಿ 1 ರಿಂದ 4 ನೇ ಆರೋಪಿಗಳ ವಿರುದ್ಧ ದೂರು ಕೊಡಿಸಿರುತ್ತೇವೆ. ಈ ವಿಚಾರವಾಗಿ ನಾನು ಆರೋಪಿಗಳ ವಿರುದ್ಧ ದಿಃ 29.09.2017 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

11. ಈಗ ನ್ಯಾಯಾಲಯದ ಮುಂದಿರುವ 4 ನೇ ಆರೋಪಿ

ಶೀಲಾ ಇವಳು 2 ಮತ್ತು 3 ನೇ ಆರೋಪಿಗಳಿಗೆ ಫೋನ್ ಮಾಡಿ ನನ್ನ ಮಗಳಿಗೆ ವರದಕ್ಷಿಣೆಯ ವಿಚಾರವಾಗಿ ಹಿಂಸೆ ಕಿರುಕುಳ ನೀಡಿ ಕುಮ್ಮಕ್ಕು ನೀಡಿರುತ್ತಾಳೆ.

12. ನನ್ನ ಮಗಳು ಕಾವ್ಯಶ್ರೀಗೆ ಮದುವೆಯಾದ ನಂತರ ವರದಕ್ಷಿಣೆಯ ವಿಚಾರವಾಗಿ 1 ರಿಂದ 4 ಆರೋಪಿಗಳು ಹಿಂಸೆ ಕಿರುಕುಳ ನೀಡಿದ್ದು ಮತ್ತು 2 ಮತ್ತು 3 ನೇ ಆರೋಪಿಗಳು ನನ್ನ ಮಗಳಿಗೆ ಚಾಕುವಿನಿಂದ ಅವಳ ಕೈ ಮತ್ತು ಕಾಲಿಗೆ ಬರೇ ಹಾಕಿ ಅವಳ ಕುತ್ತಿಗೆಗೆ ಮೊಬೈಲ್ ಚಾರ್ಜರ್ ವೈರ್ ನಿಂದ ಬಿಗಿದು ಕೊಲೆ ಮಾಡಲು ಪ್ರಯತ್ನ ಪಟ್ಟಿದ್ದು ಸದರಿ ಆರೋಪಿಗಳು ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳೇ ಆಗಿರುತ್ತಾರೆ.

<u>ಪಾಟೀ ಸವಾಲು ಶ್ರೀ ಐ.ಎಸ್.ಟಿ. ವಕೀಲರಿಂದ – ಆರೋಪಿತರ ಪರವಾಗಿ</u>

13. ಆರೋಪಿ ಪರ ವಕೀಲರು ಕಲಂ 231(2) Cr.P.C ಅರ್ಜಿ ಹಾಕಿದ್ದು ಮೇಲ್ಕಾಣಿಸಿದ ಪಾಟೀ ಸವಾಲನ್ನು ಚಾಸಾ.8, 9, 12, 13 ಇವರುಗಳು ಮುಖ್ಯವಿಚಾರಣೆಯಾದ ನಂತರ ಮಾಡುವುದಾಗಿ ವಿನಂತಿಸಿಕೊಂಡಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.

ದಿನಾಂಕಃ 16-11-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಐ.ಎಸ್.ಟಿ. ವಕೀಲರಿಂದ – ಆರೋಪಿತರ ಪರವಾಗಿ

14. ನಾನು 31 ವರ್ಷ 3 ತಿಂಗಳು ಕಾಲ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದೇನೆ. ನಾನು ನನ್ನ ಸೇವಾ ಅವಧಿಯಲ್ಲಿ ವರದಕ್ಷಿಣೆ ಕಿರುಕುಳ ಪ್ರಕರಣ, ಕೊಲೆ ಪ್ರಯತ್ನದ ಪ್ರಕರಣ ಮತ್ತು ಇತ್ಯಾದಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಾಕಷ್ಟು ವಿಚಾರಣೆ ಮಾಡಿರುತ್ತೇನೆ ಎಂದರೆ ಸರಿ. ನನ್ನ ಮಗಳನ್ನು 1 ನೇ ಆರೋಪಿಗೆ ಮದುವೆ ಮಾಡಿಕೊಡುವ ಮೊದಲು ಅವಳಿಗೆ ಬೇರೆ ಸಂಬಂಧಗಳು ಬಂದಿದ್ದವು, ಆದರೆ ಅವಳ ಪಿ.ಹೆಚ್.ಡಿ ಪೂರ್ಣ ವಾಗುವವರಿಗೂ ಅವಳ ಮದುವೆ ಮಾಡಬಾರದು ಎಂದು ನಾವು ತೀರ್ಮಾನಿಸಿದ್ದೆವು. 1 ನೇ ಆರೋಪಿಗೆ ನಮ್ಮ ಮಗಳನ್ನು ಮದುವೆ ಮಾಡಿಕೊಡುವ ಕಾಲಕ್ಕೆ ಅವಳ ಪಿ.ಹೆಚ್.ಡಿ ಮುಗಿದಿರಲಿಲ್ಲ ಎಂದರೆ ಸರಿ.

15. ನಾನು ಮತ್ತು ನನ್ನ ಹೆಂಡತಿ ಮೂಲತಃ ಚಿಕ್ಕಮಗಳೂರಿನ ಅಂಬಳೆಯವರು. ನಮ್ಮ ಕುಟುಂಬದವರು ಯಾರು ಹಳೆಬೀಡಿನಲ್ಲಿ ಯಾವುದೇ ಮದುವೆ ಆಗಿರುವುದಿಲ್ಲ. ವರದಕ್ಷಿಣೆ ಹಣವನ್ನು ಕೇಳುವುದು ತಪ್ಪು ಎಂದು ನನಗೆ ಗೊತ್ತಿರುತ್ತದೆ. ವರದಕ್ಷಿಣೆ ಯಾರಾದರು ಕೇಳಿದರೆ ಅದನ್ನು ನಾನು ಪೊಲೀಸ್ ಇಲಾಖೆಗೆ ಗಮನಕ್ಕೆ ತರುತ್ತೇನೆ ಎಂದರೆ ನಾವು ಯಾವುದೇ ವರದಕ್ಷಿಣೆ ಕೊಟ್ಟಿರುವುದಿಲ್ಲ. ಹೆಣ್ಣು ಮಕ್ಕಳಿಗೆ ಮದುವೆ ಕಾಲದಲ್ಲಿ ಒಡವೆ ಮಾಡಿಸಿಕೊಡುವುದು ಸಂಪ್ರದಾಯ ಎಂದರೆ

ಸರಿಯಲ್ಲ. ಆದರೆ ಪ್ರೀತಿಯಿಂದ ಕೊಡಬಹುದು ಅಷ್ಟೇ. ಅದೇ ರೀತಿ ಮದುವೆ ಕಾಲದಲ್ಲಿ ವರನಿಗೆ ಉಡುಗೊರೆ ಕೊಡುವುದು ನಮ್ಮಲ್ಲಿ ಸಂಪ್ರದಾಯ ಎಂದರೆ ಸಾಕ್ಷಿಯು ನಮ್ಮಲ್ಲಿ ಇಲ್ಲ ಎಂದು ಹೇಳುತ್ತಾರೆ. ನನ್ನ ಮಗಳಿಗೆ Passport ಯಾವಾಗ ಮಾಡಿಸಿರುತ್ತೇನೆ ಗೊತ್ತಿಲ್ಲ. ಅದರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮಗಳು ಮದುವೆಯಾದ ನಂತರ ತತ್ಕಾಲ್ ಅರ್ಜಿ ಸಲ್ಲಿಸಿ Passport ಮಾಡಿಸಿಕೊಂಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗಳು ಕಾವ್ಯಶ್ರೀ ಮದುವೆಯಾಗಿ ಒಂದು ವರ್ಷದ ನಂತರ London ಗೆ ಹೋಗಿರುತ್ತಾಳೆ. ನನ್ನ ಮಗಳು London ಗೆ ಹೋಗಲು Visa ಗಾಗಿ ಅರ್ಜಿ ಸಲ್ಲಿಸಿದಳು ಮತ್ತು ಸದರಿ Visa ಯಾವಾಗ ಬಂದಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಮದುವೆಯಾದ ಮೇಲೆ 1 ನೇ ಆರೋಪಿ London ಗೆ ಹೋಗುವುದೆಂದು ಮದುವೆಯಾಗುವ ಮೊದಲೇ ತೀರ್ಮಾನವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗಳ ಮತ್ತು 1 ನೇ ಆರೋಪಿಯ ವೈಯಕ್ತಿಕ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

16. ಈ ಪ್ರಕರಣವಲ್ಲದೇ ನಾನು ಪೊಲೀಸ್ ಇಲಾಖೆಯಲ್ಲಿ ಇದುದ್ದರಿಂದ ಹಲವಾರು ಪ್ರಕರಣಗಳಲ್ಲಿ ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿ. ನನ್ನ ಹೆಂಡತಿ ಚಿಕ್ಕಮಗಳೂರಿನ ನ್ಯಾಯಾಲಯಗಳಲ್ಲಿ 5-6 ಪ್ರಕರಣಗಳನ್ನು ಹಾಕಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಸರಿಯಾಗಿ ಮಾಹಿತಿ ಇಲ್ಲ. ಸಾಕ್ಷಿಗೆ

ಈಗ ಆರೋಪಿ ಪರ ವಕೀಲರು ಸಿ.ಸಿ.ನಂಬರ್ 175/2018 ರಲ್ಲಿ ಸದರಿ ಸಾಕ್ಷಿದಾರರು ಫ್ರಾಸಾ.3 ಎಂದು ಸಾಕ್ಷಿ ನೀಡಿದ್ದು, ಅದರ ಒಂದು ದೃಢೀಕೃತ ಪ್ರತಿಯನ್ನು ತೋರಿಸಿದ್ದು, ಅದನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಮತ್ತು ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿ.ಡಿ.10 ಎಂದು ಗುರುತಿಸಲಾಯಿತು.

17. ನನ್ನ ಮಗಳು ಕಾವ್ಯಶ್ರೀ ಅವಳ ಗಂಡನ ಜೊತೆ 2 ಸಲ ತಾತ್ಕಾಲಿಕ Visa ಆಧಾರದ ಮೇಲೆ London ಗೆ ಹೋಗಿ ಬಂದಿರುತ್ತಾಳೆ ಎಂದರೆ ಸರಿ. ಅವರು London ನಿಂದ ಬಂದ ಮೇಲೆ ಬೆಂಗಳೂರಿನಲ್ಲಿ ವಾಸ ಮಾಡಲು ಫ್ರಾರಂಭಿಸಿದರು ಎಂದರೆ ಸರಿ. ಬೆಂಗಳೂರಿನಲ್ಲಿ ನನ್ನ ಇನ್ನೊಬ್ಬ ಅಳಿಯ ಕೂಡ ವಾಸವಾಗಿರುತ್ತಾರೆ ಎಂದರೆ ಸರಿ. ಬೆಂಗಳೂರಿನಲ್ಲಿ ನನ್ನ ಮಗಳು ನೀಡಿದ ದೂರಿನ ಮೇರೆಗೆ ಪ್ರಥಮ ವರ್ತಮಾನ ವರದಿ ಆಗಿರುವುದಿಲ್ಲ. ಬೆಂಗಳೂರಿನಲ್ಲಿ ನನ್ನ ಮಗಳು ದೂರು ಕೊಟ್ಟ ಮೇರೆಗೆ ಅದರಲ್ಲಿ ರಾಜೀ ಸಂದಾನವಾಗಿ ಒಂದು ಮುಚ್ಚಳಿಕೆ ಪತ್ರವನ್ನು ಬರೆಯಲಾಗಿರುತ್ತದೆ ಈ ಪ್ರಕರಣದ ದೂರು ದಾಖಲಾದ ಸಮಯದಲ್ಲಿ ನನ್ನ ಮನೆಯನ್ನು ಕಟ್ಟುತ್ತಿದ್ದೆನು ಎಂದರೆ ಅದಕ್ಕಿಂತ ಮುಂಚೆಯೇ ಮನೆಯನ್ನು ಕಟ್ಟುತ್ತಿದ್ದೆನು. ಲೆಕ್ಕಕ್ಕೆ ಇರದಂತಹ ಹಣ ನಮ್ಮಲ್ಲಿ ಇತ್ತಾ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ನಾನು 1 ನೇ ಆರೋಪಿಗೆ ಯಾವುದೇ ಹಣ ಕೊಟ್ಟ ಬಗ್ಗೆ ದಾಖಲೆ ಇಲ್ಲ. ನನ್ನ Account ಗೆ 1 ನೇ

ಆರೋಪಿಯ Account ನಿಂದ ಒಂದು ಲಕ್ಷ ರೂಪಾಯಿ ಹಣ ವರ್ಗಾವಣೆಯಾಗಿರುತ್ತದೆ ಎಂದರೆ ಸಾಕ್ಷಿಯು ನಾವು ಸದರಿ ಒಂದು ಲಕ್ಷ ಹಣವನ್ನು ಅವರಿಗೆ ಸಾಲವಾಗಿ ಕೊಟ್ಟಿದ್ದೆವು, ಅದನ್ನು ಅವರು ವಾಪಸ್ಸು ಮಾಡಿರುತ್ತಾರೆ. ಬೆಂಗಳೂರಿನಲ್ಲಿ 1 ನೇ ಆರೋಪಿಯ ವಿರುದ್ಧ ದೂರು ನೀಡುವಾಗ ನನ್ನ ಮಗಳ ಕಾವ್ಯಶ್ರೀಯ ಕುತ್ತಿಗೆಯಲ್ಲಿ ಇದ್ದ ಗುರುತನ್ನು ತೋರಿಸಿ ದೂರು ನೀಡಿರುತ್ತೇವೆ ಎಂದರೆ ಸರಿ. ಅದೇ ಸಮಯದಲ್ಲಿ ಕಾವ್ಯಶ್ರೀಯ ಕುತ್ತಿಗೆಯಲ್ಲಿ ಇದ್ದ ಗುರುತು ಇರುವ ಪೋಟೋಗಳನ್ನು ನೀಡಿದ್ದೆವು ಎಂದರೆ ಸರಿ. ಅದೇ ರೀತಿ ಚಿಕ್ಕಮಗಳೂರಿನಲ್ಲಿ ಆರೋಪಿಗಳ ವಿರುದ್ಧ ಕೊಟ್ಟ ದೂರಿನ ಸಮಯದಲ್ಲಿಯು ಸಹ ಕಾವ್ಯಶ್ರೀಯ ಕುತ್ತಿಗೆಯಲ್ಲಿ ಇದ್ದ ಗುರುತು ಇರುವ ಪೋಟೋ ನೀಡಿದ್ದೆವು ಎಂದರೆ ಸರಿ, ಸಾಕ್ಷಿಯು ಮುಂದು ವರೆದು ಅವಳ ಕೈ ಕಾಲುಗಳಿಗೆ ಬರೆ ಹಾಕಿದ ಚಿತ್ರ ಣವಿರುವ ಪೋಟೋಗಳನ್ನು ಸಹ ನೀಡಿರುತೇವೆ ಎಂದು ಸಾಕ್ಷಿ ಹೇಳುತ್ತಾರೆ.

18. ಮದುವೆಯಾದ ನಂತರ 1 ನೇ ಆರೋಪಿಯು ನನ್ನ ಮಗಳ Account ಗೆ ಪ್ರತಿ ತಿಂಗಳು ದುಡ್ಡು ಹಾಕುತ್ತಿದ್ದನು ಎಂದರೆ ಸರಿಯಲ್ಲ. 2015 ರಲ್ಲಿ ಚಿಕ್ಕಮಗಳೂರಿನಲ್ಲಿ 1 ನೇ ಆರೋಪಿಯ ವಿರುದ್ಧ ದೂರು ನೀಡಿದ್ದೆವು ಎಂದರೆ ಸರಿ. ಆ ಸಮಯದಲ್ಲಿಯು ಕೂಡ ಕಾವ್ಯಶ್ರೀ ದೇಹದ ಮೇಲೆ ಆಗಿರುವ ಗುರುತುಗಳ ಪೋಟೋಗಳನ್ನು ತೋರಿಸಿ ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. 2015 ರಲ್ಲಿ ಕೊಟ್ಟ ದೂರಿನ

ವಿಚಾರವಾಗಿ ರಾಜೀಯಾಗಿ ಬರವಣಿಗೆಯಾಗಿರುತ್ತದೆ. ಆ ಸಮಯದಲ್ಲಿ ನನ್ನ ಮಗಳು ಇನ್ನು ಮುಂದೆ 1 ನೇ ಆರೋಪಿ ಜೊತೆ ಹೊಂದಿಕೊಂಡು ಸಂಸಾರ ಮಾಡುತ್ತೇನೆಂದು ಬರೆದುಕೊಟ್ಟಿದ್ದಳು ಎಂದರೆ ಸರಿ. ಸಾಕ್ಷಿಯು ಮುಂದು ವರೆದು 1 ನೇ ಆರೋಪಿಯು ಸಹ ನನ್ನ ಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಬರೆದುಕೊಟ್ಟಿರುತ್ತಾನೆ. ನನ್ನ ಮಗಳು 2015 ರ ನಂತರ ಗರ್ಭವತಿಯಾಗಿರುತ್ತಾಳೆ ಎಂದರೆ ಸರಿ. ಆಗ ನಾವು ಅವಳ ಗಂಡನ ಮನೆಯಲ್ಲಿಯೇ ಅವಳ ಸೀಮಂತ ಕಾರ್ಯ ಮಾಡಿ ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತೇವೆ ಎಂದರೆ ಸರಿ. ನನ್ನ ಮಗಳ ಹೆರಿಗೆ ವೃಚ್ಚ ಮತ್ತು ಚಿಕಿತ್ಸಾ ವೃಚ್ಚವನ್ನು 1 ನೇ ಆರೋಪಿಯೇ ನನ್ನ ಮಗಳ Account ಗೆ ಹಾಕಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಮೊದಲ ಹೆರಿಗೆಯನ್ನು ಸಾಮಾನ್ಯವಾಗಿ ತವರು ಮನೆಯವರು ಮಾಡುತ್ತಾರೆ ಎಂದರೆ ಸರಿ. ಅದೇ ರೀತಿ ನಾವು ಸಹ ಮಾಡಿರುತ್ತೇವೆ ಎಂದು ಸಾಕ್ಷಿ ಹೇಳುತ್ತಾರೆ. ಆ ಸಮಯದಲ್ಲಿ ನಾವು ತೊಟ್ಟಿಲ ಶಾಸ್ತ್ರ, ನಾಮಕರಣ ಶಾಸ್ತ್ರ ಎಲ್ಲವನ್ನು ಸಂಪ್ರದಾಯದ ಪ್ರಕಾರ ಮಾಡಿರುತ್ತೇವೆ ಎಂದರೆ ಸರಿ. ಆ ಸಮಾರಂಭಗಳಲ್ಲಿ ಎರಡು ಮನೆಯವರು ಭಾಗಿಯಾಗಿದ್ದರು ಎಂದರೆ ಸರಿ. ಅದೇ ರೀತಿ ನನ್ನ ಮಗಳು ಮತ್ತು ಮೊಮ್ಮಗನನ್ನು ಸಂಪ್ರದಾಯದ ಪ್ರಕಾರವೇ ಅವಳ ಗಂಡನ ಮನೆಗೆ ಕಳುಹಿಸಿರುತ್ತೇವೆ. ನನ್ನ ಮಗಳು ಬೆಂಗಳೂರಿನಲ್ಲಿ ಇದ್ದಾಗ

ವಿಕ್ಟೋರಿಯಾ ಆಸ್ಪತ್ರೆಗೆ 2017 ರಲ್ಲಿ ನನ್ನ ಇನ್ನೊಬ್ಬ ಅಳಿಯ ಹರೀಶನೊಂದಿಗೆ ಹೋಗಿರುತ್ತಾಳೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

19. ನಮಗೆ ದುಡ್ಡಿನ ದುರಾಸೆ ಇರುವುದರಿಂದ ಪದೇ ಪದೇ ನನ್ನ ಮಗಳನ್ನು ಉಪಯೋಗಿಸಿಕೊಂಡು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿ ಅವರಿಂದ ಹಣ ಕಿತ್ತುಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಸಮಯವಾಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

<u>ಮರುವಿಚಾರಣೆ ಇಲ್ಲ:</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.

ದಿನಾಂಕಃ 23-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಐ.ಎಸ್.ಟಿ. ವಕೀಲರಿಂದ – ಆರೋಪಿತರ ಪರವಾಗಿ

20. ನನ್ನ ಮಗಳು ಆರೋಪಿಗಳ ಮನೆಯಲ್ಲಿ ಏನು ನಡೆಯಿತು ಎನ್ನುವುದನ್ನು ನಾನು ವಯಕ್ತಿಕವಾಗಿ ನೋಡಿರುವುದಿಲ್ಲ ಎಂದರೆ ಸರಿ. 4 ನೇ ಆರೋಪಿ ಶೀಲಾ ಇವರು ಆರೋಪಿಗಳ ಜೊತೆ ಯಾವಾಗ ಯಾವಾಗ ಪೋನ್ ನಲ್ಲಿ ಮಾತನಾಡುತ್ತಿದ್ದರು ನಿಮಗೆ ವಯಕ್ತಿಕವಾಗಿ ಗೊತ್ತಾ ಎಂಬ ಪ್ರಶ್ನೆಗೆ ಅವರು ಮಾತನಾಡುತ್ತಿದ್ದ ವಿಷಯ ಮಾತ್ರ ಗೊತ್ತಿರುತ್ತದೆ. ನಾನು ಮತ್ತು ನನ್ನ ಹೆಂಡತಿ ನಮ್ಮ ಮಕ್ಕಳ ಜೊತೆ ಮತ್ತು ನಮ್ಮ ಮಕ್ಕಳು ನಮ್ಮ ಜೊತೆ ಪೋನ್ ನಲ್ಲಿ ಮಾತನಾಡುವುದು ಸರ್ವೇ ಸಾಮಾನ್ಯ ಎಂದರೆ ಸರಿ. ನನ್ನ ಮಗಳನ್ನು ಆಸ್ಪತ್ರೆಗೆ ದಾಖಲಿಸಿದ ವಿಷಯ ನಮಗೆ ಆ ದಿನ ಮಧ್ಯಾಹ್ನ 1.30 ಗಂಟೆಗೆ ಗೊತ್ತಾಗಿರುತ್ತದೆ ನಂತರ ನಾನು ಅರ್ಧ ಗಂಟೆ ಸಮಯದಲ್ಲಿ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಗೆ ದಾಖಲಾದಾಗ ಏನು Procedure ಮಾಡುತ್ತಾರೆ ಎಂಬುದು ನನಗೆ ಗೊತ್ತಿರುತ್ತದೆ. ಆಸ್ಪತ್ರೆಯ Casualty ವಿಭಾಗದ ಪಕ್ಕದಲ್ಲಿಯೇ ಪೊಲೀಸ್ out post ಇರುತ್ತದೆ ಎಂದರೆ ಸರಿ. ಸದರಿ ಪೊಲೀಸ್ out post ನಲ್ಲಿ 24 ಗಂಟೆ ಸಮಯ ಒಬ್ಬ ಮಹಿಳಾ ಪೊಲೀಸರು ಮತ್ತು ಒಬ್ಬ ಪುರುಷ ಪೊಲೀಸರು ಇರುತ್ತಾರೆ ಎಂದರೆ ನಾನು ನೋಡಿರುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾನು ಪೊಲೀಸ್

ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದರಿಂದ ಪೊಲೀಸ್ out post ನಲ್ಲಿ 24 ಗಂಟೆ ಪೊಲೀಸ್ ಸಿಬ್ಬಂಧಿ ಇರುತ್ತಾರೆ ಎಂಬ ಮಾಹಿತಿ ಇರುತ್ತದೆ. ನಾನು ಆ ದಿನ ಅಂದರೆ ದಿಃ 27.09.2017 ರಂದು ಆಸ್ಪತ್ರೆಯಲ್ಲಿ ಇದ್ದಾಗ ಆಸ್ಪತ್ರೆಯವರೇ ಪೊಲೀಸರನ್ನು ಕರೆಸಿದ್ದರು. ದೂರನ್ನು ಪೊಲೀಸ್ ಠಾಣೆಗೆ ನೊಂದವರು ಕೊಡಬಹುದು ಅಥವ ಅವರ ಪರವಾಗಿ ಬೇರೆಯವರು ಕೊಡಬಹುದು ಎಂದರೆ ಸರಿ. ದಿಃ 27.09.2017 ರಂದು ಮಧ್ಯಾಹ್ನ 1.30 ಗಂಟೆಯಿಂದ ರಾತ್ರಿ 12.00 ಗಂಟೆ ವರೆಗೆ ನನ್ನ ಮಗಳ ವಿಚಾರಕ್ಕಾಗಿ ನಾವು ಯಾರು ದೂರನ್ನು ಕೊಡಲು ಪ್ರಯತ್ನ ಮಾಡಲಿಲ್ಲ ಎಂದರೆ ಸರಿ, ಯಾಕೆಂದರೆ ನನ್ನ ಮಗಳ ಭವಿಷ್ಯದ ವಿಚಾರ ಮಾಡಿ ಆಗ ನಾವು ದೂರನ್ನು ಕೊಡಲಿಲ್ಲ. ಆ ದಿನ ನಾವು ಆರೋಪಿಗಳನ್ನು ನಮ್ಮ ಬಳಿ ಕರೆಸಿಕೊಂಡು ಘಟನೆಯ ಬಗ್ಗೆ ವಿಚಾರಿಸಿರುವುದಿಲ್ಲ. ನನಗೆ ಲಿಗೇಚರ್ ಗುರುತು, ತರಚಿದ ಗಾಯ ಮತ್ತು ಸುಟ್ಟ ಗಾಯ ಹೇಗೆ ಆಗುತ್ತದೆ ಎಂಬುದರ ಬಗ್ಗೆ ಗೊತ್ತಿರುತ್ತದೆ. ಆ ದಿನ ಮಗಳನ್ನು ಆಸ್ಪತ್ರೆಯಲ್ಲಿ ನೋಡಿದಾಗ ಅವಳು ನೈಟಿ ಹಾಕಿದ್ದಳು ಮತ್ತು ವೇಲ್ ಧರಿಸಿದ್ದಳು. ಘಟನೆ ನಡೆದ ಸಮಯದಲ್ಲಿ ನೈಟಿ ಮತ್ತು ವೇಲ್ ಅವಳ ಮೈ ಮೇಲೆ ಇತ್ತು. ನೈಟಿ ಮತ್ತು ವೇಲ್ ಮೇಲೆ ಯಾವುದಾದರು ಗುರುತು ಇದ್ದ ಬಗ್ಗೆ ನಾನು ಗಮನಿಸಿರುವುದಿಲ್ಲ.

21. ನನ್ನ ಇಷ್ಟು ವರ್ಷ ಸೇವೆಯಲ್ಲಿ ಸ್ವತಃ ಗಾಯ ಮಾಡಿಕೊಂಡು ಬಂದ ಪ್ರಕರಣಗಳನ್ನು ಸಾಕಷ್ಟು ನೋಡಿದ್ದೇನೆ

ಎಂದರೆ ಸರಿಯಲ್ಲ, ಆ ತರಹ ಪ್ರಕರಣಗಳು ನನ್ನ ಸೇವಾ ಅವಧಿಯಲ್ಲಿ ಬಂದಿರುವುದಿಲ್ಲ. ನಿ.ಪಿ.9 ಪೋಟೋದಲ್ಲಿ ಕುತ್ತಿಗೆಯ ಭಾಗದಲ್ಲಿ ಕಂಡು ಬರುವ ಗುರುತು ಚೈನ್ ಅಥವ ವೇಲ್ ನಿಂದ ಉಜ್ಜಿಕೊಂಡಾಗ ಆಗುವ ಗಾಯ ಆಗುತ್ತದೆ ಎಂದರೆ ಸರಿಯಲ್ಲ. ನನ್ನ ಸೇವೆಯಲ್ಲಿ ಪರಿಚಯವಾದ ಪೊಲೀಸ್ ಅಧಿಕಾರಿಗಳನ್ನು ಬಳಸಿಕೊಂಡು ಅವರ ಪ್ರಭಾವದಿಂದ ಪ್ರಸ್ತುತ ಪ್ರಕರಣವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ಪ್ರಕರಣದಲ್ಲಿ ಬಲವಾದ ಸಾಕ್ಷಿ ಇರಬೇಕೆನ್ನುವ ಉದ್ದೇಶದಿಂದ ಸ್ವತಃ ನಾವುಗಳೇ ನಮ್ಮ ಮಗಳ ಮೇಲೆ ಗುರುತುಗಳನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ.

22. ನಿ.ಪಿ.9 ರಿಂದ 11 ಪೋಟೋಗಳನ್ನು ಆಸ್ಪತ್ರೆಯಲ್ಲಿ ಪೊಲೀಸರು ತೆಗೆದಿರುತ್ತಾರೆ. ಸದರಿ ಪೋಟೋಗಳನ್ನು ಕ್ಯಾಮರದಿಂದ ತೆಗೆದಿರುತ್ತಾರೆ.

23. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿಯಲ್ಲಿ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಘಟನೆಯನ್ನು ಸೃಷ್ಟಿ ಮಾಡಲು ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಸುಳ್ಳು ಪ್ರಕರಣವನ್ನು ಆರೋಪಿಗಳ ವಿರುದ್ಧ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಿಸುವ ಮುನ್ನ ವಿ.ಟಿ. ಥಾಮಸ್ ಎಂಬ ವಕೀಲರಿಂದ ನನಗೆ ಒಂದು ನೋಟೀಸು ಬಂದಿತ್ತು ಎಂದರೆ ಸಾಕ್ಷಿಯು ಮೊದಲಿಗೆ ಹೌದು ಎಂದು ನಂತರ

ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ಮಗಳು ಪ್ರಕರಣದ ಆದ ಸಮಯದಲ್ಲಿ ಆರೋಪಿಗಳ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಪೋನ್ ಕಾಲ್ ಡಿಟೇಲ್ಸ್ ಘಟನೆ ನಡೆದ ಸಮಯದಲ್ಲಿ ನಮ್ಮ ಮನೆಯಲ್ಲಿ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನಾನು ಆರೋಪಿಗಳ ವಿರುದ್ದ ಹಣದ ಆಸೆಗೋಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ:</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.